೮

ಅರ್ಥದ ಜೊತೆಗೆ ಆಟ

– ದೇವಕಿ ಲಕ್ಷ್ಮೀನಾರಾಯಣ್

ಸಾರಾಂಶ: ಓದುವಿಕೆ ಎಂದರೆ ಒಟ್ಟು ಪಠ್ಯದ ಅರ್ಥ ಗ್ರಹಿಕೆಯೇ ಹೊರತು ಅದರಲ್ಲಿಯ ಪದ ಮತ್ತು ವಾಕ್ಯಗಳ ಬಿಡಿಬಿಡಿ ಅರ್ಥವನ್ನು ಮಾತ್ರ ತಿಳಿದುಕೊಳ್ಳುವುದಲ್ಲ. ಮಕ್ಕಳಲ್ಲಿ ಈ ಒಟ್ಟರ್ಥದ ಗ್ರಹಿಕೆಯ ಸಾಮರ್ಥ್ಯವನ್ನು ಬೆಳೆಸುವುದು ಮುಖ್ಯವಾಗುತ್ತದೆ. ಇದು ಪಠ್ಯದ ಸಂಲಗ್ನತೆಯ ಗ್ರಹಿಕೆಯಾಗುತ್ತದೆ. ಈ ಮೂಲಕ ಮಕ್ಕಳಲ್ಲಿ ಭಾಷೆಯ ಅರಿವು ಬೆಳೆಯುತ್ತದೆ. ಮಕ್ಕಳಲ್ಲಿ ಅಂಥ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಒಂದು ಮಾದರಿ ಚಟುವಟಿಕೆಯ ವಿನ್ಯಾಸವನ್ನು ಇಲ್ಲಿ ಕೊಟ್ಟಿದೆ.

ಪ್ರಮುಖ ಪದಗಳು: ವಿಸಂಕೇತೀಕರಿಸು–decode, ಸಂಲಗ್ನ–cohesion, ಸೂಚ್ಯಾರ್ಥ (ಧ್ವನಿತಾರ್ಥ)–implicit meaning, ಪ್ರಕಟಿತಾರ್ಥ (ವಿಶದಾರ್ಥ)–explicit meaning, ಭಾಷೆಯ ಅರಿವು–awareness of the language, ಅಧಿಭಾಷಾಶಾಸ್ತ್ರೀಯ ಅರಿವು– metalinguistic awareness, ಪಠ್ಯದ ಒಟ್ಟರ್ಥ– textual meaning, ೫ ರಿಂದ ೭ ನೇ ತರಗತಿ– class 5 to 7, ಖಾಲಿ ಜಾಗಗಳಲ್ಲಿ ಪದ/ವಾಕ್ಯ ತುಂಬಿ ಆಟ– play with the text by substituting words and phrases.

ಪೀಠಿಕೆ

ಓದುವಿಕೆ ಅಂದರೆ, ಅಕ್ಷರವನ್ನು/ಪದಗಳನ್ನು ವಿಸಂಕೇತೀಕರಿಸಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಾಗಿದೆ. ಒಂದು ಪದವನ್ನು, ಮತ್ತೆ ಒಂದು ವಾಕ್ಯವನ್ನು, ಹಾಗೇ ವಾಕ್ಯಗಳ ಗುಂಪನ್ನು ಅರ್ಥಮಾಡಿಕೊಳ್ಳುವಾಗ, ಒಂದೊಂದೂ ಇನ್ನೊಂದರಿಂದ ಬೇರೆಯೇ ಆಗಿರುತ್ತದೆ. ಈ ಬಗೆಯ ಅರ್ಥೈಸುವಿಕೆಯನ್ನು ಹೆಚ್ಚಾಗಿ "ಪಠ್ಯದ ಅರ್ಥ"ವನ್ನು ಮಾಡಿಕೊಳ್ಳುವುದು ಎಂದು ಹೇಳಲಾಗುತ್ತದೆ. ಒಂದು ಪಠ್ಯವು ಮೌಖಿಕ ಅಥವಾ ಲಿಖಿತ ರೂಪದಲ್ಲಿರಬಹುದು. ಅದು ಯಾವುದೇ ರೂಪದಲ್ಲಿರಲಿ, ಪಠ್ಯವೊಂದರಲ್ಲಿ ವಾಕ್ಯಗಳ ಒಂದು ಸಮೂಹವಿರುತ್ತದೆ ಮತ್ತು

ಅಲ್ಲಿಯ ವಾಕ್ಯಗಳನ್ನು ಬಂಧಿಸುವ ಒಂದು ಸಾಮಾನ್ಯ ಎಳೆಯು ಅವುಗಳನ್ನೆಲ್ಲ ಹಿಡಿದಿಟ್ಟಿರುತ್ತದೆ. ಈ ಎಳೆಯನ್ನು ಸಂಲಗ್ನ (cohesion) ಎಂದು ಕರೆಯಲಾಗುತ್ತದೆ ಮತ್ತು ಅದು ಪಠ್ಯದೊಳಗೆ (ಪದ, ಪದಗಳಿಂದಾದ ವಾಕ್ಯ ಮತ್ತು ವಾಕ್ಯಗಳ ಸಮೂಹ) ಹುದುಗಿರುವ ಅರ್ಥದ ಸಂಬಂಧವನ್ನು ಕಟ್ಟುವ ಕೆಲಸವನ್ನು ಮಾಡುತ್ತದೆ. ವಾಸ್ತವದಲ್ಲಿ, ಸಂಲಗ್ನದ ತಾಂತ್ರಿಕ ಅರ್ಥವು ಒಂದು ಪಠ್ಯದ ಒಳಗಿರುವ ಅರ್ಥಗಳ ಸಂಬಂಧ ಎಂದಿದೆ. ಇದು ಯಾವಾಗ ಸಂಭವಿಸುತ್ತದೆ ಎಂದರೆ ಪಠ್ಯದ ಕೆಲವು ಅಂಶಗಳ ವಿವರಣೆಯು ಇನ್ನೊಂದು ಅಂಶದ ಮೇಲೆ ಅವಲಂಬಿಸಿರುವಾಗ ಎಂದು ಹೇಳಬಹುದು. ಸಾಮಾನ್ಯವಾಗಿ ತರಗತಿಗಳಲ್ಲಿ ಪದಗಳ ಅರ್ಥ ಮತ್ತು ವಾಕ್ಯಗಳ ಅರ್ಥವನ್ನು ಕಲಿಸಲಾಗುತ್ತದೆ. ಅಂಥ ಸಂದರ್ಭಗಳಲ್ಲಿ, ಪಠ್ಯದ ಅರ್ಥವು ಎಲ್ಲ (ಬಿಡಿಬಿಡಿ) ವಾಕ್ಯಗಳ ಅರ್ಥಗಳನ್ನು ಒಟ್ಟುಗೂಡಿಸಿರುವುದೇ ಆಗಿದೆ. ಆದ ಕಾರಣ ಅದನ್ನು ವಿವರಿಸಿ ವಿಶದಪಡಿಸುವ (implicit) ಅಗತ್ಯವಿಲ್ಲ ಎಂದು ಭಾವಿಸಲಾಗುತ್ತದೆ. ಸಾಕ್ಷರತೆಯು ಹೆಚ್ಚು ಪರಿಣಾಮಕಾರಿಯಾಗಬೇಕಾದರೆ ಮತ್ತು ಅಧಿಭಾಷಾಶಾಸ್ತ್ರೀಯ ಅರಿವು (metalinguistic awareness) ಬೆಳೆಯಬೇಕಾದರೆ ಪಠ್ಯದ ಒಟ್ಟರ್ಥವನ್ನು ವಿಶದೀಕರಿಸುವ ಅಗತ್ಯವಿದೆ. ಈ ಕೆಳಗಿನ ಚಟುವಟಿಕೆಯು ಭಾಷಾ ಸಂಲಗ್ನದ ಮೂಲ ಹಂತವನ್ನು ಪ್ರತಿನಿಧಿಸುತ್ತದೆ.

ಉದ್ದೇಶ: ಈ ಚಟುಚಟಿಕೆಯ ಉದ್ದೇಶವು ಪಠ್ಯದ ಒಟ್ಟರ್ಥವನ್ನು ಗ್ರಹಿಸುವ ಕೌಶಲವನ್ನು ಕಲಿಸುವುದು.

ವ್ಯಾಪ್ತಿ: ಈ ಚಟುವಟಿಕೆಯನ್ನು ೫ರಿಂದ ೭ರ ವರೆಗಿನ ಯಾವುದೇ ತರಗತಿಗೂ ಬಳಸಬಹುದು. ಇನ್ನೂ ಹಿರಿಯ ತರಗತಿಗಳಿಗೆ ಬಳಸುವುದಕ್ಕೆ ಪಠ್ಯದ ಸಂಕೀರ್ಣತೆಯನ್ನು ಹೆಚ್ಚಿಸಿಕೊಳ್ಳಬೇಕು.

ಪ್ರಕ್ರಿಯೆ

- ಹಲವು ಕಡೆ ಖಾಲಿ ಬಿಟ್ಟಿರುವ ಒಂದು ಪಠ್ಯವನ್ನು ಕೊಡಲಾಗಿದೆ. ವಿದ್ಯಾರ್ಥಿಗಳು ಕೊಟ್ಟಿರುವ ಆಯ್ಕೆಯ ಪದಗಳಿಂದ ಸರಿಯಾದ್ದನ್ನು ಆರಿಸಿ ಆ ಖಾಲಿ ಜಾಗಗಳನ್ನು ಭರ್ತಿ ಮಾಡಬೇಕು.
- ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಸೂಚನೆಗಳನ್ನು ಕೊಡಿ:
  - ಇದು ಒಂದು ಸಣ್ಣಕತೆ. ಇದರಲ್ಲಿ ಅನೇಕ ಖಾಲಿ ಜಾಗಗಳಿವೆ. ಅವುಗಳಿಗೆ ೧, ೨, ೩, ಇತ್ಯಾದಿಯಾಗಿ ಸಂಖ್ಯೆಗಳನ್ನು ನೀಡಿದೆ.

- ಪ್ರತಿಯೊಂದಕ್ಕೂ ಬಹು ಆಯ್ಕೆಯ ಪದಗಳನ್ನು/ವಾಕ್ಯಭಾಗಗಳನ್ನು ಕೂಡಾ ೧, ೨, ೩ . . . . ಎಂದು ಗುರುತಿಸಿಲಾದ ಕಾಲಂಗಳಲ್ಲಿ ನೀಡಲಾಗಿದೆ.
- ಸಂಬಂಧಿಸಿದಂತೆ ಕೊಟ್ಟಿರುವ ಆಯ್ಕೆಗಳಿಂದ ಒಂದನ್ನು ಆರಿಸಿ ಖಾಲಿ ಜಾಗವನ್ನು ತುಂಬಬೇಕು. ಉದಾಹರಣೆಗೆ, ಖಾಲಿಜಾಗ ೧ನ್ನು ಆಯ್ಕೆ ಕಾಲಮ್ ಸಂಖ್ಯೆ ಒಂದರಲ್ಲಿ ನೀಡಲಾದ ಬಹು ಆಯ್ಕೆಗಳಿಂದ ಆರಿಸಿ ತುಂಬಬೇಕು, ಖಾಲಿಜಾಗ ೨ನ್ನು ಬಹು ಆಯ್ಕೆ ಕಾಲಂ ಎರಡರಿಂದ ಆರಿಸಿ ತುಂಬಬೇಕು ಎಂದು ವಿವರಿಸಿ ಹೇಳುವುದು.
- **ಗಮನಿಸಿ:** ನೀವು ಕೊಟ್ಟಿರುವ ನಿರ್ದಿಷ್ಟ ಕಾಲಂನ ಯಾವುದೇ ಪದ ಅಥವಾ ವಾಕ್ಯಭಾಗವನ್ನಾದರೂ ಆರಿಸಬಹುದು. ಅಂದರೆ, ಖಾಲಿಜಾಗದ ಸಂಖ್ಯೆ ಮತ್ತು ಆಯ್ಕೆಯ ಕಾಲಂ ಸಂಖ್ಯೆಯನ್ನು ಬದಲಾಯಿಸಬಾರದು.

ಯಾವುದೇ ಉತ್ತರವೂ ಸರಿಯೂ ಅಲ್ಲ ಅಥವಾ ತಪ್ಪೂ ಅಲ್ಲ; ಅವು ಸೂಕ್ತವಾಗಿರಬಹುದು ಅಥವಾ ಅಲ್ಲದೆಯೂ ಇರಬಹುದು.

ಖಾಲಿ ಜಾಗಗಳನ್ನು ತುಂಬಿದ ಅನಂತರ ಕತೆಯನ್ನು ಸಂಪೂರ್ಣವಾಗಿ ಓದಿ ಅದು ಅರ್ಥಬದ್ಧವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

ವಿಸ್ತರಣಾ ಚಟುವಟಿಕೆಗಳು

- ಬೇರೆ ಬೇರೆ ಆಯ್ಕೆಗಳನ್ನು ಆರಿಸಿ ಖಾಲಿಜಾಗವನ್ನು ತುಂಬುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಮತ್ತು ಭರ್ತಿಮಾಡಿದ ಗದ್ಯಭಾಗವನ್ನು ಓದಿ ಅರ್ಥಬದ್ಧವಾಗಿದೆಯೇ ಎಂದು ಗಮನಿಸಬೇಕು. ಎಲ್ಲಿ ಅರ್ಥ ವ್ಯತ್ಯಾಸವಿದೆಯೋ ಅವುಗಳನ್ನು ಗುರುತಿಸಿ ಕಾರಣಗಳೇನಿರಬಹುದೆಂದು ಚರ್ಚಿಸಬೇಕು.
- ಖಾಲಿಜಾಗಗಳಲ್ಲಿ ಬೇರೆಬೇರೆ ಪದ/ವಾಕ್ಯ ಭಾಗಗಳನ್ನು ತುಂಬಿ ಅವುಗಳೊಂದಿಗೆ ಆಟವಾಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು.

ಕಲಿಕಾ ಫಲಿತಗಳು

- ವಿದ್ಯಾರ್ಥಿಗಳು ಪಠ್ಯದ ಅರ್ಥವನ್ನು ವಿವರಿಸಲು ಸಮರ್ಥರಾಗುತ್ತಾರೆ.
- ವಿದ್ಯಾರ್ಥಿಗಳು ಪಠ್ಯದ ಅರ್ಥವು ಎಲ್ಲಿ ವ್ಯತ್ಯಾಸವಾಯಿತು ಎಂಬುದನ್ನು ಗುರುತಿಸುತ್ತಾರೆ ಮತ್ತು ಅದರ ಕಾರಣವನ್ನು ಅರ್ಥಮಾಡಿಕೊಳ್ಳುತ್ತಾರೆ.

ಕತೆಗಳನ್ನು ರಚಿಸಲು ಶಿಕ್ಷಕರಿಗೆ ಸುಳಿವುಗಳು

- ವಿವಿಧ ಆಯ್ಕೆಗಳುಳ್ಳ ಒಂದೇ ರೀತಿಯ ಐದಾರು ಕತೆಗಳನ್ನು ರಚಿಸುವುದು. ಅವೆಲ್ಲ ಪಠ್ಯಗಳೂ ಒಂದೇ ರೀತಿ ಇವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
- ಎಲ್ಲ ಆಯ್ಕೆಯ ಪದ/ವಾಕ್ಯಭಾಗಗಳನ್ನೂ ತೆರವುಮಾಡಿ ಮತ್ತು ಅವುಗಳನ್ನು ಅನುಕ್ರಮವಾಗಿ ಜೋಡಿಸಿ.

ಖಾಲಿಬಿಟ್ಟ ಜಾಗಗಳ ಪಠ್ಯಕ್ಕೆ ಉದಾಹರಣೆ: ಒಂದು ತಿಂಗಳ ಹಿಂದೆ – – – (ಆಯ್ಕೆ ೧). ಆಗ ನಾನು – – – (ಆಯ್ಕೆ ೨). ಮತ್ತು – – – (ಆಯ್ಕೆ ೩). ನನಗೆ ಅನಿಸಿತು – – – (ಆಯ್ಕೆ ೪). ಆಗ ನನಗೆ – – – ಆಯ್ಕೆ ೫. ನಾನು ಯೋಚಿಸಿದೆ – – – ಆಯ್ಕೆ ೬. ನನ್ನ ಸಹಾಯಕ್ಕೆ – – – ಆಯ್ಕೆ ೭ ಇಷ್ಟಾಗುವಾಗ – – – ಆಯ್ಕೆ ೮.

ಆಯ್ಕೆ 1 (ಒಂದು ತಿಂಗಳ ಹಿಂದೆ ...)	ಆಯ್ಕೆ 2 (ಆಗ ನಾನು ...)	ಆಯ್ಕೆ 3 (ಮತ್ತು ...)	ಆಯ್ಕೆ 4 (ನನಗೆ ಅನಿಸಿತು ...)
* ಬಿರುಗಾಳಿ ಬೀಸುತ್ತಿದ್ದ ಕಾರ್ಗತ್ತಲಿನ ಒಂದು ರಾತ್ರಿಯಿತ್ತು. * ಒಂದು ಆಶ್ಚರ್ಯಕರ ಘಟನೆ ನನಗೆ ಎದುರಾಯಿತು. * ಏನಾಯಿತು ಎಂದರೆ, ನೀನು ನಂಬಲಾರೆ. * ಏನು ನಡೆಯಿತು ಕೇಳಿಸಿಕೋ.	* ನಗರದಲ್ಲಿದ್ದೆ * ಮನೆಯೊಳಗಿದ್ದೆ * ಮನೆಯ ಹಿಂಬದಿಯ ಹಿತ್ತಿಲಲ್ಲಿದ್ದೆ * ನಾನು ಅಡಿಗೆ ಮನೆಯಲ್ಲಿದ್ದೆ	* ಫೋನಿನಲ್ಲಿ ಮಾತನಾಡುತ್ತಿದ್ದೆ. * ಪೂರಿ ತಿನ್ನುತ್ತಿದ್ದೆ. * ಬರಿಗಾಲಿನಲ್ಲಿ ನಡೆಯುತ್ತಿದ್ದೆ. * ಅರೆ ನಿದ್ದೆಯಲ್ಲಿದ್ದೆ.	* ನಾನು ಆಪತ್ತಿನಲ್ಲಿದ್ದೇನೆ. * ನನ್ನನ್ನು ಯಾರೋ ನೋಡುತ್ತಿದ್ದಾರೆ. * ಏನೋ ಸರಿಯಿಲ್ಲ. * ನಾನೊಬ್ಬ ಅಸಹಾಯಕ ಚಿಕ್ಕ ಹುಡುಗನಿದ್ದೇನೆ.

ಆಯ್ಕೆ 5 (ಆಗ ನನಗೆ...)	**ಆಯ್ಕೆ 6 (ನಾನು ಯೋಚಿಸಿದೆ...)**	**ಆಯ್ಕೆ 7 (ನನ್ನ ಸಹಾಯಕ್ಕೆ)**	**ಆಯ್ಕೆ 8 (ಇಷ್ಟಾಗುವಾಗ...)**
* ಒಮ್ಮೆಗೇ ಭಯ ಹತ್ತಿತು. * ಒಮ್ಮೆಗೇ ಖುಷಿಯಾಯಿತು. * ಒಮ್ಮೆಗೇ ಭಯವಾಯಿತು. * ಒಮ್ಮೆಗೇ ಬಹಳ ಕೆಟ್ಟದು ಅನಿಸಿತು.	* ನಾನು ಏನೋ ಒಂದು ನಿರ್ಣಯವನ್ನು ಮಾಡಬೇಕು. * ನಾನು ಏನಾದರು ಮಾಡಬೇಕು. * ನಾನು ಯಾರನ್ನಾದರು ಕರೆಯಬೇಕು. * ನಾನು ನನ್ನ ಸ್ನೇಹಿತ (ಸೂಚನೆ: ನಿಮ್ಮ ಸ್ನೇಹಿತನ/ತೆಯ ಹೆಸರು ಬರೆಯಿರಿ)ನನ್ನು ನೋಡುತ್ತಿದ್ದೇನಲ್ಲ!	* ನಾನು ಪೊಲಿಸರನ್ನು ಕರೆಯಬೇಕೆಂದುಕೊಂಡೆ. * ನಾನು ತಾಯಿಯನ್ನು ಕರೆಯಬೇಕೆಂದುಕೊಂಡೆ. * ನಾನು ತಂದೆಯನ್ನು ಕರೆಯಬೇಕೆಂದುಕೊಂಡೆ. * ನನ್ನ ಸ್ನೇಹಿತನನ್ನು ಕರೆಯಬೇಕೆಂದುಕೊಂಡೆ.	* ನನಗೆ ಭರವಸೆ ಅನಿಸಿತು. * ನನಗೆ ಸಂತೋಷದಿಂದ ಮುಖ ಅರಳಿತು. * ನನಗೆ ಉಸಿರು ಬಿಡುವಂತಾಯಿತು. ನನಗೆ ನಾನೆಂಥ ಅದೃಷ್ಟವಂತ/ತೆ ಅನಿಸಿತು.

ಚಿಂತನಾತ್ಮಕ ಪ್ರಶ್ನೆಗಳು

೧. "ಓದುವಿಕೆ" ಎಂದರೆ ಏನು? "ಅರ್ಥೈಸುವಿಕೆ" ಎಂದರೆ ಏನು?

೨. ಅಧಿಭಾಷಾಶಾಸ್ತ್ರೀಯ ಅರಿವು (metalingustic awareness) ಎಂದರೆ ಏನು?

೩. ಈ ಚಟುವಟಿಕೆ ಭಾಷೆಯ ಅರಿವನ್ನು ಹೇಗೆ ಹೆಚ್ಚಿಸಬಲ್ಲುದು ವಿವರಿಸಿ.

೪. ಇದೇ ರೀತಿಯಲ್ಲಿ ನೀವೂ ಚಟುವಟಿಕೆಗಳನ್ನು ರಚಿಸಿ.

ಲೇಖಕರು: ದೇವಕಿ ಲಕ್ಷ್ಮೀನಾರಾಯಣ್, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದ ನೇತೃತ್ವ ವಹಿಸಿದ್ದ ಇವರು, ಸದ್ಯ ವೃತ್ತಿಯಿಂದ ನಿವೃತ್ತರಾಗಿದ್ದಾರೆ. ಇವರು ಇಲ್ಲಿ ಸೇರುವ ಮೊದಲು ಭಾರತೀಯ ಭಾಷೆಗಳ ಕೇಂದ್ರೀಯ ಭಾಷಾಸಂಸ್ಥಾನ, ಮೈಸೂರಿನಲ್ಲಿ ೨೦ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಮನಶ್ಶಾಸ್ತ್ರದಲ್ಲಿ ಪಿಎಚ್.ಡಿ.,

ಪದವಿ ಪಡೆದಿದ್ದಾರೆ ಮತ್ತು ಭಾಷಾವಿಜ್ಞಾನದಲ್ಲಿ ನೆದರ್‌ಲ್ಯಾಂಡ್ಸ್‌ನ ಗ್ರೊನಿಜೆನ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

devaki@azimpremjifoundation.org

ಅನುವಾದ: ನಾಗಮಣಿ ಎಸ್ ಎನ್ / **ಪರಿಶೀಲನೆ:** ರಾಜಗೋಪಾಲ್

ಮೂಲ: Language and Language Teaching Volume 2 Number 1 January 2013.

❑